ದಿಃ 23-08-2016 ರಂದು ಸಾಕ್ಷಿಯನ್ನು ಸತ್ಯ ಪ್ರತಿಜ್ಞೆ ಮೇರೆಗೆ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲ ರವರಿಂದಃ

ನಿಡಿ 2 ನ್ನು ಬರೆಯುವ ಮುನ್ನ ನನಗೆ ಅದರಲ್ಲಿನ ಸಾಕ್ಷಿಗಳು ಮತ್ತು ಪಕ್ಷಗಾರರ ಪರಿಚಯವಿತ್ತು. ಈ ಮೊದಲು ನನ್ನ ಜೊತೆ ಅವರು ಕಾಗದಗಳನ್ನು ಬರೆಸಿದ್ದಾರೆ. ಅವರು ಮೆಳವಂಕಿ ಗ್ರಾಮದವರು. ನಿಡಿ 2 ಮತ್ತು 3 ರ ಸಾಕ್ಷಿಗಳು ಬೇರೆ ಬೇರೆ. ಬಿನ್ ಕಬ್ಜಾ ಕರಾರು ಪತ್ರ, ಕಬ್ಜಾ ಕರಾರು ಪತ್ರ ಮತ್ತು ಉತಾರನ್ನು ತಂದಿದ್ದಾರು. ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ಯಾವುದೇ ಕರಾರು ಪತ್ರ ತಂದಿರಲಿಲ್ಲ. ರಾಯಪ್ಪನ ಹೆಂಡತಿ ಮತ್ತು ಮಕ್ಕಳ ಸಹಿ ಬೇಕು ಎಂದು ನಾನು ಸಲಹೆ ಕೊಟ್ಟಿಲ್ಲ. ಪಕ್ಷಗಾರರು ನನಗೆ ದಾವೆ ಚಾಲ್ತಿಯಲ್ಲಿದ್ದ ಬಗ್ಗೆ ಮಾಹಿತಿ ಕೊಟ್ಟಿಲ್ಲ. ನಿಡಿ 23 ನ್ನು ನಾನೇ ಬರೆದಿದ್ದೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ, ಕಬ್ಜಾ ಪತ್ರವನ್ನು ನಾನೇ ಬರೆದಿದ್ದೇನೆಂದು ಬರೆಸಿಲ್ಲ. ನಿಡಿ 2 ರ ಪ್ರಕಾರ ಕ್ರಯ ಪತ್ರ ಬರೆದುಕೊಡುವ ಅವಧಿ 2 ವರ್ಷ. ನಾನು ಬರೆದ ನಿಡಿ 23 ಕ್ಕೆ ಸಾಕ್ಷಿದಾರರು ಸಹಿ ಮಾಡಿಲ್ಲ ಎಂದರೆ ನಿಜ. ನಿಡಿ 23 ರಲ್ಲಿ ಸಾಕ್ಷಿ ಕಾಲಂ ನಲ್ಲಿ 1 ಮತ್ತು 2 ಎಂದು ಕ್ರಮ ಸಂಖ್ಯೆ ಹಾಕಿ ಖಾಲಿ ಬಿಡಲಾಗಿದೆ ಎಂದರೆ ನಿಜ. ಸಾಕ್ಷಿದಾರರ ಹೆಸರು ಮತ್ತು ಸಹಿ ಇಲ್ಲ ಎಂದರೆ ನಿಜ. ನಿಡಿ 23 ಕ್ಕೆ ಪಕ್ಷಗಾರರನ್ನು ಬಿಟ್ಟು ಕಬ್ಜಾ ಕೊಟ್ಟ ಬಗ್ಗೆ ಯಾರು ಸಾಕ್ಷಿದಾರರು ಇಲ್ಲ ಎಂದರೆ ನಿಜ. 5,000/- ರೂ. ನ ವ್ಯವಹಾರ ನನ್ನ ಸಮಕ್ಷಮ ಆಗಿಲ್ಲ.

ನಿಡಿ 23 ಮತ್ತು 3 ರಲ್ಲಿ ರಾಯಪ್ಪನ ಹೆಂಡತಿ ಮತ್ತು ಮಕ್ಕಳ ಸಹಿ ಇಲ್ಲ ಎಂದರೆ ನಿಜ. ನಿಡಿ 23 ಮತ್ತು 3 ನ್ನು ಬರೆಯಲು ರಾಯಪ್ಪನು ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸುಳ್ಳು. ನಿಡಿ 23, 2 ಮತ್ತು 3 ರಲ್ಲಿ ಮೊತ್ತವನ್ನು ರೂ. 1,25,000/- ಕ್ಕೆ ಏರಿಸಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ನಿಜ. ನಾನು ಮತ್ತು ಇತರ ಪಕ್ಷಗಾರರು ಸೇರಿ ರಾಯಪ್ಪನ ಹೆಂಡತಿ ಮತ್ತು ಮಕ್ಕಳ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ನಿಡಿ 23 ಮತ್ತು 3 ನ್ನು ಬರೆದಿದ್ದೇವೆಂದರೆ ಸುಳ್ಳು. ನಿಡಿ 23 ಮತ್ತು 3 ನ್ನು ಬರೆಯುವಾಗ ರಾಯಪ್ಪನ ಹೆಂಡತಿ ಮತ್ತು ಮಕ್ಕಳನ್ನು ಕರೆಸಿ ಎಂದು ಹೇಳಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿದ್ದೆಲ್ಲ ಸುಳ್ಳು ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಈ ಓ ಹೆ ಕೇ ಸರಿ ಇದೆ

ಹೆಚ್ಚುವರಿ. ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.

ಗೋಕಾಕ